# ಎರಡು ಮಳೆ, ಒಂದೇ ಬೆಳೆ

ಹತ್ತು ವರ್ಷಗಳ ಹಿಂದಿನ ಮಾತು. ಅಭ್ಯಂಜನಕ್ಕೆಂದು ಮೈಗೆಲ್ಲಾ ಎಣ್ಣೆ ಹಚ್ಚಿಸಿಕೊಂಡ ಸುಖದಲ್ಲಿ ಇದ್ದ ವ್ಯಕ್ತಿ, ಬೆಂಗಳೂರು ಹೊರವಲಯದ ತಮ್ಮ ಮನೆಯಲ್ಲಿ ಆರಾಮಾಗಿ ಇದ್ದರು.

ಅವರದ್ದೇ ಊರಿನಲ್ಲಿದ್ದ ಹುಡುಗನಿಗೆ ಸಿನಿಮಾ ಹುಚ್ಚು. ನಾಟಕ, ಧಾರಾವಾಹಿ ಎಂದೆಲ್ಲಾ ಒಂದು ಕೈ ನೋಡಿದ್ದ ಕುಳ್ಳಗಿನ ದೇಹದ, ಬಿಳಿ ಬಣ್ಣದ ಹುಡುಗ ಚಿತ್ರರಂಗಕ್ಕೆ ಕಾಲಿಟ್ಟು ಒಂದೆರಡು ಸಣ್ಣ ಪುಟ್ಟ ಪಾತ್ರಗಳಲ್ಲಿ ನಟಿಸಿದ್ದಾಗಿತ್ತು. ಅದೃಷ್ಟವಶಾತ್ ಸಾಹಿತ್ಯದ ಗಂಧ, ಸಿನಿಮಾದ ಗಾಳಿ, ಕಥನಗಳ ಪರಂಪರೆ ಎಲ್ಲವೂ ಗೊತ್ತಿದ್ದ ನಿರ್ದೇಶಕರೊಬ್ಬರು ಆ ಹುಡುಗನಿಗೆ ಸ್ನೇಹಿತರಾದರು. ಆ ನಿರ್ದೇಶಕರು ಮಾಡಿದ್ದ ಕಥೆ ಹುಡುಗನಿಗೆ ಹಿಡಿಸಿತು. ನಿರ್ಮಾಪಕರನ್ನು ಹುಡುಕಬೇಕಲ್ಲ; ತನ್ನೂರಿನಲ್ಲಿ ಎಣ್ಣೆ ಹಚ್ಚಿಕೊಂಡು ಕುಳಿತಿದ್ದ ಆ ವ್ಯಕ್ತಿಯ ಮನೆಗೆ ನಿರ್ದೇಶಕರನ್ನೂ ಕರೆದುಕೊಂಡು ಹೋದ.

ಒಂದು ಕಾಲನ್ನು ರಿಯಲ್ ಎಸ್ಟೇಟ್‌ನಲ್ಲೂ ಇನ್ನೊಂದು ಕಾಲನ್ನು ರಾಜಕೀಯದಲ್ಲೂ ಇಟ್ಟಿದ್ದ ಅವರಿಗೆ ಸಿನಿಮಾ ಅಂದರೆ ಅಷ್ಟಕ್ಕಷ್ಟೆ. ರಾಜ್‌ಕುಮಾರ್ ಸಿನಿಮಾಗಳನ್ನು ಎಂಜಾಯ್ ಮಾಡುತ್ತಿದ್ದ ಅವರು ನಾಸ್ಟಾಲ್ಜಿಕ್ ಎನ್ನುವಂಥ ಮನಸ್ಥಿತಿಯಲ್ಲಿ ಇದ್ದವರು. ಎಣ್ಣೆ ಹಚ್ಚಿಕೊಂಡು ದೇಹ ಸುಖದ ನಿರಾಳತೆಯಲ್ಲಿ ಇದ್ದ ಅವರಿಗೆ ದೇವರು ಅದ್ಯಾವ ಒಳ್ಳೆಯ ಮನಸ್ಸು ಕೊಟ್ಟನೋ, ಸಿನಿಮಾ ನಿರ್ಮಾಣಕ್ಕೆ ಒಪ್ಪಿಬಿಟ್ಟರು.

ಒಂದೆರಡೇ ವರ್ಷಗಳಲ್ಲಿ ಮಳೆ ಸುರಿಯಿತು. ಚಿತ್ರರಂಗ ತೋಯ್ದು ತೊಪ್ಪೆಯಾಯಿತು. ಅದು ಯಶಸ್ಸಿನ ದಿವ್ಯ ಸ್ನಾನ. ಭೂಮಿ ನೆಂದ ಮೇಲೆ ಅಣಬೆಗಳೂ ಹುಟ್ಟಿಕೊಳ್ಳುತ್ತವಲ್ಲ; ಹಾಗೆಯೇ ರಿಯಲ್ ಎಸ್ಟೇಟ್‌ನಲ್ಲಿ ಕಷ್ಟಪಡದೇ ಒಂದಿಷ್ಟು ಸತ್ಫಲ ಉಂಡ ಅನೇಕರು ಸಿನಿಮಾ ಶೋಕಿ ಹತ್ತಿಸಿಕೊಂಡರು. ‘ಒಂದು ಎಕರೆ ಭೂಮಿ ಮಾರಿದರೆ ಒಂದು ಸಿನಿಮಾ’ ಎಂಬ ಲೆಕ್ಕಾಚಾರವೇ ಅವರಿಗೆಲ್ಲಾ ಆ ಕಾಲಘಟ್ಟದಲ್ಲಿ ದೊಡ್ಡ ಆಮಿಷ. ಗೆದ್ದರೆ ಲಾಭ, ಶೋಕಿ ತೀರಿಸಿಕೊಂಡ ಖುಷಿ. ಸೋತರೆ ಒಂದೆಕರೆ ಢಮಾರ್ ಎಂದು ಲಾಟರಿಗೆ ಇಳಿಯುವವರಂತೆ ಮುನ್ನುಗ್ಗಿದರು. ಕೆಲವರು ಸಿನಿಮಾ ಮುಹೂರ್ತ ಸಮಾರಂಭಗಳನ್ನು ಅದ್ದೂರಿಯಾಗಿ ನೆರವೇರಿಸಿ, ಅಲ್ಲೆಲ್ಲಾ ಮಳೆಯಲ್ಲಿ ಕೈತೊಳೆದುಕೊಂಡು ಸುಖವಾಗಿರುವ ಆ ಎಣ್ಣೆಸ್ನಾನ ಪ್ರೇಮಿ ನಿರ್ಮಾಪಕರನ್ನು ತಮ್ಮ ಮಾದರಿ ಎನ್ನುವಂತೆ ಬಣ್ಣಿಸಿದರು. ಇನ್ನು ಕೆಲವರು ಎರಡು ಹೆಜ್ಜೆ ಮುಂದೆ ಹೋಗಿ ಸಿನಿಮಾ ಸಮಾರಂಭಗಳಿಗೆ ಆ ಯಶಸ್ವಿ ನಿರ್ಮಾಪಕರನ್ನು ಅತಿಥಿಯಾಗಿ ಕರೆಯಲಾರಂಭಿಸಿದರು.

ಮೊದಮೊದಲು ಮಳೆಗೆ ಬಂಡವಾಳ ಹಾಕಿ ಗೆದ್ದ ನಿರ್ಮಾಪಕರಿಗೆ ಅದು ಗೌರವ ಎನಿಸಿತ್ತು. ಒಂದೆರಡು ವರ್ಷ ಉರುಳಿದ ಮೇಲೆ ಪರಿಸ್ಥಿತಿ ಬದಲಾಯಿತು. ತಮ್ಮಿಂದ ನೂರು ನಿರ್ಮಾಪಕರು ಹಾಳಾಗಿರಬಹುದು ಎಂದು ವಿಷಾದದಿಂದ ಅವರು ಹೇಳಿಕೊಂಡರು.

ಒಂದು ಸಿನಿಮಾ ಗೆದ್ದಿತೆಂದರೆ ಕೇಳಬೇಕೆ; ಅವರ ಮನೆಗೆ ಸ್ಕ್ರಿಪ್ಟ್‌ಗಳನ್ನು ಒಯ್ದು ಕಥೆ, ಕಥನ, ಕದ್ದ ಸಿನಿಮಾ ಕಥೆಗಳನ್ನು ಒಪ್ಪಿಸುವವರ ಸಾಲು ಸೃಷ್ಟಿಯಾಯಿತು. ಯಾವ ಆಮಿಷ, ಆಕರ್ಷಣೆಗೂ ಮಣಿಯದ ಸ್ಥಿತಿ ತಲುಪಿದ್ದ ಅವರು ಇನ್ನೊಂದೆರಡು ಸಿನಿಮಾ ಮಾಡಿದರಷ್ಟೆ. ‘ಸೂಪರ್‌ಸ್ಪೀಷಿಯಸ್’ ಎನ್ನುವಂತೆ ಅವರು ಮಾಡಿದ ಒಂದು ಸಿನಿಮಾ ಶೀರ್ಷಿಕೆಯಲ್ಲೂ ಮುಂಗಾರು ಇತ್ತು. ಈ ಸಲ ಮಳೆ ಹುಲುಸು ಬೆಳೆಯನ್ನೇನೂ ಬೆಳೆಯಲಿಲ್ಲ. ಈಗ ಆ ಜಾಣ ನಿರ್ಮಾಪಕರು ರಾಜಕೀಯದ ಮೊಗಸಾಲೆಯಲ್ಲಿ ಅಡ್ಡಾಡುತ್ತಿದ್ದಾರೆ. ರಿಯಲ್ ಎಸ್ಟೇಟ್ ಜೊತೆಗೆ ಇದ್ದೇ ಇದೆ. ಸಿನಿಮಾದಿಂದ ಮಾತ್ರ ಅವರು ದೂರ ಬಹು ದೂರ!

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68